ದಿನಾಂಕಃ 03-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 01ನೇ ಪ್ರತಿವಾದಿ ಪರ - ಶ್ರೀ ಕೆ.ಎಂ.ಕೆ ವಕೀಲರಿಂದ.

ನನ್ನ ಊರು ಗುಂಡುಮನುಗು ಇರುತ್ತದೆ. ನನ್ನ ತಂದೆ ಬಸಪ್ಪ ನನ್ನ ತಂದೆ-ತಾಯಿರವರು 15 ವರ್ಷಗಳಿಂದ ಖಾನಾಮಡಗು ಗ್ರಾಮದಲ್ಲಿ ವಾಸವಾಗಿರುತ್ತೇವೆ. 15 ವರ್ಷಗಳ ಹಿಂದೆ ಗುಂಡುಮನುಗ ಗ್ರಾಮದಲ್ಲಿ ವಾಸವಾಗಿದ್ದೆವು. ಗುಂಡುಮುನುಗು ಗ್ರಾಮದಲ್ಲಿ ವಾಸವಾಗಿದ್ದೆವು ಎಂದು ತೋರಿಸಲು ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ತಂದೆಯ ತಾಯಿಯ ಹೆಸರು ಚೆನ್ನಮ್ಮ ಇರುತ್ತದೆ. ಸದರಿ ಚೆನ್ನಮ್ಮನವರ ಊರು ಗುಂಡುಮುನುಗು ಇರುತ್ತದೆ. ತವರ ಮನೆ ಖಾನಾಮಡಗು ಗ್ರಾಮವಾಗಿರುತ್ತದೆ. ಚೆನ್ನಮ್ಮನವರ ತವರು ಮನೆ ಚಿಕ್ಕಗೊಂಡನಹಳ್ಳಿ ಗ್ರಾಮವಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು 01ನೇ ಪ್ರತಿವಾದಿಗೆ ಸೇರಿದ್ದು ನನಗೆ ಯಾವುದೆ ಹಕ್ಕು ಅದಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಚೆನ್ನಮ್ಮ ಮತ್ತು ಭಿಮಕ್ಕ ನನ್ನ ಅಜ್ಜಿಯಾಗಬೇಕು. ಅವರು ಅಕ್ಕ-ತಂಗಿಯರಾಗಬೇಕು. ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನವರಿಗೆ ಯಾವುದೆ ಆಸ್ತಿಗಳಿರಲಿಲ್ಲ ಅವರಿಗೆ ಅಕ್ಕಮ್ಮ ಎಂಬುವುರು ದಾವಾ ಆಸ್ತಿಯನ್ನು 1968 ರಲ್ಲಿ ಕೊಟ್ಟಿದ್ದರಿಂದ ಸದರಿ ಆಸ್ತಿಗಳು ನಮ್ಮ ಅಜ್ಜನವರ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ ಆದ್ದರಿಂದ ನನಗೆ ಪಾಲು ಕೇಳಲು ಬರುದಿಲ್ಲ ಎಂದರೆ ಸರಿಯಲ್ಲ. ನಾವು ಚನ್ನೆಮ್ಮನವರ ವಾರಸುದಾರಾಗಿರುತ್ತೇವೆ ಎಂದರೆ ಸರಿ. ಭಿಮಕ್ಕನವರ ವಾರಸುದಾರರು 01ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ.

1968ರಲ್ಲಿ ಅಕ್ಕಮ್ಮನವರು ನನ್ನ ಅಜ್ಜಿಯಾದ ಚೆನ್ನಮನವರಿಗೆ ಖಾನಾಮಡಗು ಗ್ರಾಮದಲ್ಲಿ 01 ಕಿರಾಣಿ ಅಂಗಡಿ 16 ಕಂಬದ ಒಂದು ಮಾಳಿಗೆ , ಒಂದು ಕಣ ಮತ್ತು ಭಿಮಕ್ಕನವರಿಗೆ ಗುಂಡುಮುನುಗು ಗ್ರಾಮದಲ್ಲಿರುವ ಆಸ್ತಿ ಸೇರಬೆಕೆಂದು ಚೆನ್ನಮ್ಮ ಮತ್ತು ಭಿಮಕ್ಕನವರು ಒಪ್ಪಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 01ನೇ ಪ್ರತಿವಾದಿಗೆ ತನ್ನ ಪಾಲಿಗೆ ಬಂದ ಗುಂಡುಮುನುಗು ಗ್ರಾಮದಲ್ಲಿರುವ ಆಸ್ತಿಯನ್ನು ಬೆರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡಿದ ಆಸ್ತಿಗಳಿಗೆ ಸಂಬಂಧಿಸಿದ ಪಹಣಿಗಳಲ್ಲಿ ಖರಿದಿದಾರರ

ಹೆಸರುಗಳು ಬಂದಿರುತ್ತದೆ ಎಂದರೆ ಸಾಕ್ಷಿಯು ಈದಾವೆಯನ್ನು ಹೂಡಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ನಾನು ದಾವೆಯನ್ನು ಹೂಡುವಾಗ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶಿಲಿಸಿ ದಾವೆಯನ್ನು ಹೂಡಿರುತ್ತೆನೆ ಎಂದರೆ ಸರಿ. ದಾವಾ ಆಸ್ತಿಯ ಐಟಂ ನಂ . 02ರ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳಲ್ಲಿ ಕೆ.ಟಿ.ತಿಪ್ಪೆಸ್ವಾಮಿ ಎಂಬುವವರ ಹೆಸರಿದ್ದು ಅರವನ್ನು ಈದಾವೆಯಲ್ಲಿ ಕಕ್ಷದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾವು ಖಾನಾಮಡುಗು ಗ್ರಾಮದಲ್ಲಿರುವ ಮನೆಯನ್ನು ಈದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸ್ವಂತ ಆದಾಯದಿಂದ ಮನೆಯನ್ನು ಖರಿದಿಮಾಡಿರುತ್ತೆನೆ ಎಂದು ಹೇಳುತ್ತಾರೆ. 1968 ರಲ್ಲಿ ನಮ್ಮ ಅಜ್ಜಿಯರ ಮಧ್ಯ ಪಾಲು ವಿಭಾಗ ಆಗಿದ್ದರಿಂದ ನಾನು ಈಗ ಪಾಲು ವಿಭಾಗವನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 02ನೇ ಪ್ರತಿವಾದಿ ಪರ - ಶ್ರೀ ಬಿ.ಎಸ್.ಪಿ(ಎಸ್.ಎಮ್.ವಕೀಲರ ಪರವಾಗಿ) ವಕೀಲರಿಂದ.

01ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.